ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು

ದಿನಾಂಕಃ **02.03.2024**

ಸಿ.ಸಿ.ನಂ.**1747/2021**

ಪಿರ್ಯಾದುದಾರರು : ರಾಜ್ಯ ಸರ್ಕಾರದ ಪರವಾಗಿ ನಗರ ಠಾಣಾ ಪೊಲೀಸರು,

ವಿರುದ್ಧ

ಆರೋಪಿತರು: 1. ಶ್ರೀಮತಿ ಜಯಶೀಲ ಕೋಂ ತಾಳಿಕೋಟೆ

<u>ದೋ ಷಾ ರೋ ಪ ಣೆ</u>

ಚಿಕ್ಕಮಗಳೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ನಂದೀಶ ಆರ್.ಪಿ. ಬಿ.ಎ., (ಲಾ) ಎಲ್‌ಎಲ್.ಎಂ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

1 ನೇ ಆರೋಪಿಯಾದ ನೀವು 2 ನೇ ಆರೋಪಿಯೊಂದಿಗೆ ಈ ಮೊದಲೇ ದಿನಾಂಕ 10.07.2017 ರಂದು 1 ನೇ ಆರೋಪಿಯಾದ ನಿಮ್ಮ ಹೆಸರಿನಲ್ಲಿರುವ ಇ -211 ನಿವೇಶನವನ್ನು ಶ್ರೀಮತಿ ಹೆಚ್ ಆರ್ ಚಂದ್ರಕಲಾ ರವರಿಗೆ 20 ಲಕ್ಷ ರೂ ಗಳಿಗೆ ಸ್ವಾಧೀನ ರಹಿತ ಕರಾರು ಪತ್ರವನ್ನು ಮಾಡಿಸಿಕೊಟ್ಟಿದ್ದರೂ ಸಹ ಚಾಸಾಃ1 ರವರಿಗೆ ಮೋಸ ಮಾಡುವ ಉದ್ದೇಶದಿಂದ , ದಿನಾಂಕಃ 12.08.2018 ರಂದು ಚಿಕ್ಕಮಗಳೂರು ನಗರ ಠಾಣಾ ವ್ಯಾಪ್ತಿಯ ಬ್ರಾಡ್ ವೇ ಆರ್ಕೇಡ್ ? ನಲ್ಲಿರುವ ಚಾಸಾಃ1 ರವರ ಕಚೇರಿಯಲ್ಲಿ ಚಾಸಾಃ1 ದೇವೆಂದ್ರ ಕುಮಾರ್ ರವರಿಗೆ ಸದರಿ ನಿವೇಶನವನ್ನು ಚಾಸಾಃ1 ರವರಿಗೆ ಮಾರಾಟ ಮಾಡುವುದಾಗಿ ಹೇಳಿ ಅವರಿಂದ ಹಂತ ಹಂತವಾಗಿ ರೂ 1100000 ಗಳನ್ನು ಮುಂಗಡವಾಗಿ ಪಡೆದುಕೊಂಡಿದ್ದು ನಂತರ ದಿನಾಂಕ 23.04.2019 ರಂದು ಚಿಕ್ಕಮಗಳೂರು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸ್ವಾಧೀನ ರಹಿತ ಕರಾರು ಪತ್ರವನ್ನು ಮಾಡಿಸಿಕೊಟ್ಟಿದ್ದು , ಆ ಮೂಲಕ ಚಾಸಾಃ1 ರವರಿಗೆ ನೀವು

ಅಪ್ರಮಾಣಿಕತನದಿಂದ ವಂಚಿಸಿ ನಂಬಿಕೆ ದ್ರೋಹ ಮಾಡಿರುತ್ತೀರಿ. ಆ ಕಾರಣ ನೀವು ಭಾ.ದಂ.ಸಂ.ಕಲಂ.**420** ರ ಅಡಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ಆರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

sd
[ನಂದೀಶ ಆರ್.ಪಿ.]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ ಚಿಕ್ಕಮಗಳೂರು